standard chartered

## ಗೃಹ ಸಾಲ ಎಂದರೇನು ?

ಗೃಹ ಸಾಲ ಅಥವಾ ವಸತಿ ಸಾಲ ಅಥವಾ ಗೃಹ ಹಣಕಾಸು ಅಥವಾ ವಸತಿ ಹಣಕಾಸು ಎಂದರೆ ಆಸ್ತಿಯ ಅರ್ಜನೆ ಅಥವಾ ನಿರ್ಮಾಣಕ್ಕಾಗಿ ಪಡೆದುಕೊಂಡ ಭದ್ರತೆ ಪ್ರಕಾರದ ಸಾಲವಾಗಿದೆ. ಖರೀದಿಸಿದ ವಸತಿ ಆಸ್ತಿಯನ್ನೇ ಮನೆಯ ಸಾಲದ ಮೇಲಾಧಾರವಾಗಿ ಒದಗಿಸಲಾಗುತ್ತದೆ. ಮನೆ ಖರೀದಿಸುವವರು, ಮುಖ್ಯವಾಗಿ ತಮ್ಮ ಹಣಕಾಸಿನ ಹೊರೆಯನ್ನು ಹಗುರಗೊಳಿಸುವುದಕ್ಕಾಗಿ ಗೃಹ ಸಾಲಕ್ಕೆ ಅರ್ಜಿ ಸಲ್ಲಿಸುತ್ತಾರೆ, ಹಾಗೂ ಆನ್ಲೈನ್ ಗೃಹ ಸಾಲ ಪ್ರಕ್ರಿಯೆಯು ಇದನ್ನು ಎಲ್ಲರಿಗೂ ಅನುಕೂಲಕರವಾಗಿಸಿದೆ.

## ಗೃಹ ಸಾಲಕ್ಕಾಗಿ ಇರಬೇಕಾದ ಅರ್ಹತೆ ಏನು ?

ಭಾರತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗೃಹ ಸಾಲವನ್ನು ಪಡೆಯುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ, ಗೃಹ ಸಾಲದ ಒಳ್ಳೆಯ ಡೀಲನ್ನು ಪಡೆಯುವುದಕ್ಕಾಗಿ ನೀವು ಮೊದಲಿಗೆ ಗೃಹ ಸಾಲದ ಪ್ರಯೋಜನಗಳನ್ನು ಅರಿತುಕೊಳ್ಳಬೇಕು. ಇದು, ನಿಮ್ಮ ಗೃಹ ಸಾಲದಿಂದ ಏನನ್ನು ನಿರೀಕ್ಷಿಸಬೇಕು ಎಂಬುದನ್ನು ಅರಿತುಕೊಳ್ಳಲು ನಿಮಗೆ ಸಹಾಯ ಮಾಡುತ್ತದೆ.

<u>ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕಿನ ಗೃಹ ಸಾಲದ ಪ್ರಮುಖ ಪ್ರಯೋಜನಗಳು</u>

- ಕನಿಷ್ಠ ಪ್ರಕ್ರಿಯೆ ಶುಲ್ಕ
- ದಾಖಲೆಗಳ ಸುಲಭ ಸಂಗ್ರಹಣ
- ಮನೆ ಬಾಗಿಲಲ್ಲೇ ಸೇವೆ

<u>ನಿಮ್ಮ ಗೃಹ ಸಾಲ ಅರ್ಹತೆಯ ಮೇಲೆ ಪ್ರಭಾವ ಬೀರುವ ಅಂಶಗಳು</u>

- ನಿಮ್ಮ ಮಾಸಿಕ ಆದಾಯ
- ನಿಮ್ಮ ಪ್ರಸ್ತುತ ವಯಸ್ಸು
- ಸಾಲದ ಇತಿಹಾಸ
- ಚಾಲ್ತಿಯಲ್ಲಿರುವ ಸಾಲದ ಹೊಣೆಗಾರಿಕೆಗಳು
- ನಿಯಂತ್ರಕ ಅಗತ್ಯತೆಗಳು

## ಗೃಹ ಸಾಲದ ಮೇಲೆ ಯಾವುದೇ ತೆರಿಗೆ ಪ್ರಯೋಜನ ದೊರೆಯುತ್ತದೆಯೇ *

ಹೌದು. ಈ ಕೆಳಗಿನ ವಿವರಗಳಂತೆ, ಪಡೆದ ಗೃಹ ಸಾಲದ ಮೇಲೆ ಸಾಲಗಾರನು ತೆರಿಗೆ ಪ್ರಯೋಜನಗಳನ್ನು ಪಡೆಯಬಹುದು.

- ಅಸಲಿನ ಮರುಪಾವತಿಯ ಮೇಲೆ ತೆರಿಗೆ ಪ್ರಯೋಜನಗಳು: ಒಂದು ವೇಳೆ ಇದು ಮೊದಲ ಮನೆಯಾಗಿದ್ದರೆ, ಐ.ಟಿ. ಕಾಯಿದೆ 1961ರ ಸೆಕ್ಷನ್ 80ಸಿ ಮತ್ತು 80ಸಿಸಿಇ ಅಡಿಯಲ್ಲಿ ನಿಮ್ಮ ಗೃಹ ಸಾಲದ ಮೇಲೆ ರೂ. 1.5 ಲಕ್ಷದಷ್ಟು ಅಸಲಿನ ಮರುಪಾವತಿಯ ಮೇಲೆ ತೆರಿಗೆ ಕಡಿತವನ್ನು ಅನುಮತಿಸಲಾಗುತ್ತದೆ. ಒಂದು ವೇಳೆ ಎರಡನೇ ಮನೆ ಅಥವಾ ನಿರ್ಮಾಣ ಹಂತದಲ್ಲಿರುವ ಆಸ್ತಿಗಳಾಗಿದ್ದರೆ, ಅಸಲು ಮರುಪಾವತಿಯ ಮೇಲಿನ ತೆರಿಗೆ ಪ್ರಯೋಜನವು ಅನ್ವಯವಾಗುವುದಿಲ್ಲ.
- ಪಾವತಿಸಿದ ಬಡ್ಡಿಯ ಮೇಲೆ ತೆರಿಗೆ ಪ್ರಯೋಜನ: ಪಾವತಿಸಿದ ಬಡ್ಡಿಯ ಮೇಲಿನ ತೆರಿಗೆ ಪ್ರಯೋಜನವು, ಸ್ವಯಂ ವಾಸವೇ ಅಥವಾ ಬಾಡಿಗೆಗೆ ನೀಡಿದ ಆಸ್ತಿಯೇ ಅಥವಾ ಆಸ್ತಿಯು ನಿರ್ಮಾಣ ಹಂತದಲ್ಲಿದೆಯೇ ಎಂಬುದನ್ನು ಅವಲಂಬಿಸಿರುತ್ತದೆ.

**ಪಾವತಿಸಿದ ಅಸಲು ಮತ್ತು ಬಡ್ಡಿಯ ಮೇಲಿನ ತೆರಿಗೆ ಪ್ರಯೋಜನಗಳ ಸಾರಾಂಶವು ಈ ಕೆಳಗಿನಂತೆ ಇದೆ**

| ತೆರಿಗೆ ಪ್ರಯೋಜನಗಳು | ಮರುಪಾವತಿಸಿದ ಅಸಲಿನ ಮೇಲೆ | ಪಾವತಿಸಿದ ಬಡ್ಡಿಯ ಮೇಲೆ |
|---|---|---|
| ಮೊದಲ ಮನೆ – ಸ್ವಯಂ ವಾಸಕ್ಕೆ | ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ಕಡಿತವಾಗಿ ಗರಿಷ್ಠ ರೂ. 1,50,000 (ಹಿರಿಯ ನಾಗರಿಕರಿಗೆ ರೂ. 2 ಲಕ್ಷ) ತನಕ ಮರುಪಾವತಿ ಮಾಡಿದ ನೈಜ ಅಸಲನ್ನು ಹೂಡಿಕೆಯಾಗಿ ಕ್ಲೇಮು ಮಾಡಬಹುದು. | ಯಾವ ಹಣಕಾಸು ವರ್ಷದಲ್ಲಿ ಸಾಲವನ್ನು ತೆಗೆದುಕೊಳ್ಳಲಾಗಿದೆಯೋ ಆ ಹಣಕಾಸು ವರ್ಷದಿಂದ ಹಿಡಿದು 5 ವರ್ಷಗಳೊಳಗೆ ಮನೆಯನ್ನು ಪೂರ್ಣಗೊಳಿಸಿದ್ದರೆ ಪಾವತಿಸಿದ ಗರಿಷ್ಠ 2 ಲಕ್ಷದಷ್ಟು ನೈಜ ಗೃಹ ಸಾಲ ಬಡ್ಡಿ (ಹಿರಿಯ ನಾಗರಿಕರಿಗೆ ರೂ. 3 ಲಕ್ಷ)<br>ಒಂದು ವೇಳೆ ಮನೆಯನ್ನು ಐದು ವರ್ಷಗಳೊಳಗೆ ಪೂರ್ಣಗೊಳಿಸದೆ ಇದ್ದರೆ ಆಗ ರೂ. 30,000 ದಷ್ಟು ತೆರಿಗೆ ವಿನಾಯಿತಿ<br>ರೂ. 50 ಲಕ್ಷದ ವರೆಗಿನ ವೆಚ್ಚದ ಮನೆಗೆ ರೂ. 35 ಲಕ್ಷ ತನಕದ ಸಾಲಗಳಿಗಾಗಿ ಪಾವತಿಸಿದ ಬಡ್ಡಿಯ ಮೇಲೆ ರೂ. 50,000 ದ ತನಕ ಹೆಚ್ಚುವರಿ ವಿನಾಯಿತಿ. |

| | | |
|---|---|---|
| ಮೊದಲ ಮನೆ – ಬಾಡಿಗೆಗೆ ನೀಡಲಾಗಿದೆ/ ಖಾಲಿ ಇದೆ (ಬಾಡಿಗೆಗೆ ನೀಡಿದ ಆಸ್ತಿ ಎಂದು ಪರಿಗಣಿಸಲಾಗುತ್ತದೆ) | ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ಕಡಿತಕ್ಕಾಗಿ ರೂ. 1,50,000 (ಹಿರಿಯ ನಾಗರಿಕೆ ರೂ. 2 ಲಕ್ಷ) ತನಕ ಅರ್ಹ. ಒಂದು ವೇಳೆ ಆಸ್ತಿಯ ಮಾಲೀಕನು ಕೆಲಸದ ಕಾರಣ ಬೇರೆ ನಗರದಲ್ಲಿ ವಾಸಿಸುತ್ತಿದ್ದರೆ ಮಾತ್ರವೇ ಈ ಕಡಿತವು ಲಭ್ಯ. | ಬಡ್ಡಿಯ ಮೇಲಿನ ವಿನಾಯಿತಿಯನ್ನು ಎರಡರ ಕೆಳಮಿತಿಗೆ ಸೀಮಿತಗೊಳಿಸಲಾಗಿದೆ,<br>a. ರೂ. 2,00,000 ಅಥವಾ<br>b. ತೆರಿಗೆ ಪಾವತಿದಾರನು ಹೊಂದಿರುವ ಎಲ್ಲಾ ಆಸ್ತಿಗಳಿಗೆ ಪಾವತಿಸಿದ ನೈಜ ಬಡ್ಡಿ |
| ಎರಡನೇ ಮನೆ ಅಥವಾ ಹೆಚ್ಚುವರಿ ಆಸ್ತಿ | ಯಾವುದೂ ಇಲ್ಲ | ಬಡ್ಡಿಯ ಮೇಲಿನ ವಿನಾಯಿತಿಯನ್ನು ಎರಡರ ಕೆಳಮಿತಿಗೆ ಸೀಮಿತಗೊಳಿಸಲಾಗಿದೆ,<br>a. ರೂ. 2,00,000 ಅಥವಾ<br>b. ತೆರಿಗೆ ಪಾವತಿದಾರನು ಹೊಂದಿರುವ ಎಲ್ಲಾ ಆಸ್ತಿಗಳಿಗೆ ಪಾವತಿಸಿದ ನೈಜ ಬಡ್ಡಿ |
| ನಿರ್ಮಾಣ ಹಂತದಲ್ಲಿರುವ ಆಸ್ತಿ | ಪಾವತಿಸಿದ ಬಡ್ಡಿಯ ಮೇಲೆ | ಪಾವತಿಸಿದ ಬಡ್ಡಿಯನ್ನು, ರೂ. 2 ಲಕ್ಷದ ಒಟ್ಟಾರೆ ವಾರ್ಷಿಕ ಮಿತಿಯೊಳಗೆ, ಆಸ್ತಿ ಪೂರ್ಣಗೊಳಿಸಿದ ಅಥವಾ ಹಸ್ತಾಂತರಗೊಳಿಸಿದ ನಂತರದ ಐದು ಹಣಕಾಸು ವರ್ಷಗಳಲ್ಲಿ ಸಮಾನ ಭಾಗಗಳಲ್ಲಿ ಕ್ಲೇಮು ಮಾಡಬಹುದು. |

- ತೆರಿಗೆ ಪ್ರಯೋಜನಗಳು ವಿವರಣಾತ್ಮಕವಾಗಿವೆ. ನೈಜ ತೆರಿಗೆ ಪ್ರಯೋಜನಗಳು ಆದಾಯ ತೆರಿಗೆ ವಿವಿಧ ಮಾನದಂಡಗಳ ಈಡೇರಿಸುವಿಕೆಗೆ ಒಳಪಟ್ಟಿವೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಿಮ್ಮ ಸಿ.ಎ. ಯನ್ನು ಅಥವಾ ಅಧಿಕೃತ ತೆರಿಗೆ ಸಮಾಲೋಚಕರನ್ನು ಸಂಪರ್ಕಿಸಿ. ತೆರಿಗೆ ಪ್ರಯೋಜನಗಳಿಗಾಗಿ ಬ್ಯಾಂಕು ಸಾಲಗಾರರಿಗೆ ಮಾರ್ಗದರ್ಶನ ನೀಡುವುದಿಲ್ಲ.

**ಕಂತಿನಲ್ಲಿ ಕ್ರಮೇಣ ಸಾಲ ತೀರಿಸುವ ವೇಳಾಪಟ್ಟಿ ಎಂದರೇನು ?**

ಕಂತಿನಲ್ಲಿ ಕ್ರಮೇಣ ಸಾಲ ತೀರಿಸುವ ವೇಳಾಪಟ್ಟಿಯು, ಸಾಲದ ಅವಧಿಯ ಕೊನೆಯ ತನಕ ಸಾಲವು ಸಂಪೂರ್ಣವಾಗಿ ಪಾವತಿಯಾಗುವ ತನಕ ಪ್ರತಿ ಸಮಾನ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯನ್ನು ತೋರಿಸುವ, ಆವರ್ತಕ ಸಾಲ ಮರುಪಾವತಿಗಳ ಸಂಪೂರ್ಣ ಕೋಷ್ಟಕವನ್ನು ಪ್ರತಿನಿಧಿಸುತ್ತದೆ.

**ಗೃಹ ಸಾಲ ದಾಖಲೆಗಳ ಪರಿಶೀಲನೆ ಪಟ್ಟಿ**

ಗೃಹ ಸಾಲದ ವಿಚಾರ ಬಂದಾಗ ದಾಖಲೆ ಸಂಗ್ರಹಣವು ಅತ್ಯಂತ ಪ್ರಮುಖ ಅಂಶವೆನಿಸುತ್ತದೆ. ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕಿನಲ್ಲಿ ಸರಳ ಮತ್ತು ಕನಿಷ್ಠ ಗೃಹ ಸಾಲ ದಾಖಲೆ ಸಂಗ್ರಹಣವು, ಸಾಲಗಾರರಿಗೆ ಗೃಹ ಸಾಲಕ್ಕಾಗಿ ಅರ್ಜಿ ಸಲ್ಲಿಸಲು ಅನುಕೂಲಕರವಾಗಿಸುತ್ತದೆ. ನಿಮ್ಮ ಸಾಲಕ್ಕಾಗಿ ಬೇಕಾಗುವ ದಾಖಲೆಗಳ ಪಟ್ಟಿಯ ಮೇಲೆ ಒಮ್ಮೆ ಕಣ್ಣು ಹಾಯಿಸಿ :

- ಗುರುತಿನ ದಾಖಲೆ
- ಆದಾಯದ ದಾಖಲೆ
- ವಯಸ್ಸಿನ ದಾಖಲೆ : ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಾಸ್ ಪೋರ್ಟ್, ವಾಹನ ಚಾಲನಾ ಪರವಾನಗಿ
- ವಿಳಾಸದ ದಾಖಲೆ : ಆಧಾರ್ ಕಾರ್ಡ್, ಪಾಸ್ ಪೋರ್ಟ್, ಮತದಾರರ ಗುರುತಿನ ಚೀಟಿ, ವಾಹನ ಚಾಲನಾ ಪರವಾನಗಿ
- ಬ್ಯಾಂಕಿಂಗ್ ಮಾಹಿತಿ
- ಸಂಬಂಧದ ದಾಖಲೆ
- ಶೈಕ್ಷಣಿಕ ಅರ್ಹತೆಯ ದಾಖಲೆ

ಗೃಹ ಸಾಲಕ್ಕಾಗಿ ಈಗ ಆನ್ಲೈನ್ ನಲ್ಲಿ ಅರ್ಜಿ ಸಲ್ಲಿಸಿ.
https://www.sc.com/in/loans/home-property-loans/home-loans/

ಮೇಲೆ ನೀಡಲಾಗಿರುವ ದಾಖಲೆ ಪಟ್ಟಿಯು ಸೂಚ್ಯ ಪಟ್ಟಿಯಾಗಿದ್ದು, ಸಾಲದ ಅರ್ಜಿಯ ವೇಳೆ ಅನ್ವಯವಾಗುವಂತೆ, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕಿನ ಚಾಲ್ತಿಯಲ್ಲಿರುವ ನೀತಿಯನ್ನು ಅನುಸರಿಸಿ ಸ್ವೀಕಾರಾರ್ಹವಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ನಮ್ಮ ರಿಲೇಶನ್ ಶಿಪ್ ಮ್ಯಾನೇಜರ್ (ಆರ್.ಎಂ.) ಅವರೊಂದಿಗೆ ನೀವು ಮಾತನಾಡಬಹುದು ಅಥವಾ ಸಮೀಪದ ಶಾಖೆಗೆ ಭೇಟಿ ನೀಡಬಹುದು

**ಗೃಹ ಸಾಲಕ್ಕಾಗಿ ಪ್ರಕ್ರಿಯೆ ಶುಲ್ಕಗಳು ಮತ್ತು ಇತರ ವೆಚ್ಚಗಳು**

ಶುಲ್ಕಗಳು ಮತ್ತು ವೆಚ್ಚಗಳಿಗಾಗಿ ದಯವಿಟ್ಟು ಕೆಳಗಿನ ಲಿಂಕ್ ಅನ್ನು ನೋಡಿ
https://av.sc.com/in/content/docs/in-sosc-apr15.pdf

<u>ಗಮನಿಸಿ :</u>

- ಸಾಲದ ಕರಾರು, ಖಾತರಿದಾರರ ಕರಾರು, ನೋಂದಣಿ ಶುಲ್ಕಗಳು ಇತ್ಯಾದಿಗಳ ಮೇಲಿನ ಮುದ್ರಾಂಕ ಶುಲ್ಕವು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ಆರ್.ಬಿ.ಐ. ಮತ್ತು ಇತರ ಅಫಿದಾವಿತ್ ಗಳ ಸ್ಟ್ಯಾಂಪಿಂಗ್/ನೋಟರೈಸೇಶನ್ ಅನ್ವಯ.
- ಸರ್ಕಾರ/ ಆರ್.ಬಿ.ಐ. ನಿರ್ದೇಶನಗಳ ಪ್ರಕಾರ ತೆರಿಗೆಗಳು/ ಇತರ ಶಾಸನಬದ್ಧ ಶುಲ್ಕಗಳು ಸಾಲಗಾರನಿಗೆ ಅನ್ವಯವಾದಲ್ಲಿ ವಿಧಿಸಲಾಗುವುದು.

**ಬ್ಯಾಂಕಿನೊಂದಿಗೆ ಅಡಮಾನ ಸಾಲಕ್ಕೆ ಅರ್ಜಿ ಸಲ್ಲಿಸುವಾಗ ದಯವಿಟ್ಟು ಈ ಕೆಳಗಿನವುಗಳನ್ನು ಗಮನಿಸಿ :**

o ಮೇಲಿನ ಶುಲ್ಕಗಳಿಗೆ ಹೆಚ್ಚುವರಿಯಾಗಿ ಅನ್ವಯವಾಗುವ ಸರಕು ಮತ್ತು ಸೇವಾ ತೆರಿಗೆಯನ್ನು ವಿಧಿಸಲಾಗುವುದು.

o ಅನ್ವಯವಾಗುವ ಬಡ್ಡಿ ದರ, ಸಾಲದ ಮೊತ್ತ, ನಿಮ್ಮ ಸಾಲದ ಇ.ಎಂ.ಐ. ಮತ್ತು ಅವಧಿಯನ್ನು ಸಾಲದ ಕರಾರಿನಲ್ಲಿ ಹೇಳಲಾಗುವುದು ಹಾಗೂ ಅದರಲ್ಲಿರುವ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ನಿಮ್ಮ ಸಾಲವನ್ನು ನಿರ್ವಹಿಸಲಾಗುತ್ತದೆ. ಸಾಲದ ಅವಧಿಯಲ್ಲಿ ನಾವು ಬಡ್ಡಿ ದರವನ್ನು ಬದಲಾಯಿಸಿದರೆ ಹೊಸ ಬಡ್ಡಿ ದರವನ್ನು ನಾವು ನಿಮಗೆ ತಿಳಿಸುತ್ತೇವೆ.

o ನೀವು ಸಾಲದ ಮೊತ್ತದ ಮುಂಗಡ ವಿಲೇವಾರಿಯನ್ನು (ಸಾಲದ ಅವಧಿ ಮುಗಿಯುವ ಮೊದಲೇ) ಆಯ್ದುಕೊಂಡರೆ, ಅನ್ವಯವಾಗುವ ಶುಲ್ಕಗಳನ್ನು ಪಾವತಿಸಲು ನೀವು ಜವಾಬ್ದಾರರು. ದಯವಿಟ್ಟು ಎಸ್.ಒ.ಎಸ್.ಸಿ. ದಾಖಲೆಯಲ್ಲಿರುವ ವಿವರವಾದ ನಿಯಮಗಳನ್ನು ನೋಡಿ.

o ಸಾರ್ವಜನಿಕ ಡೊಮೇನ್ ನಲ್ಲಿ ಉಲ್ಲೇಖಿಸಲಾಗಿರುವ ಆರ್.ಒ.ಐ. ಗಳು ಸೂಚ್ಯವಾಗಿದ್ದು ಅವುಗಳನ್ನು ಬದ್ಧಪಡಿಸುವ ಷರತ್ತು ಎಂದು ಪರಿಗಣಿಸಬಾರದು.